## ಕ್ಯೂರಿಂಗ್ ಎಷ್ಟು? ಹೇಗೆ?

ಸಿಮೆಂಟ್ ಬಳಕೆಯಾಗಿರುವ ಯಾವುದೇ ವಸ್ತುವಿಗೂ (ಉದಾ: ಕಾಂಕ್ರೀಟು, ಪ್ಲಾಸ್ಟರ್ ಇತ್ಯಾದಿ) ಕ್ಯೂರಿಂಗ್ ಅತ್ಯಗತ್ಯ. ಆ ವಸ್ತುವಿನಲ್ಲಿಯ ನೀರಿನ ಅಂಶ ಸಿಮೆಂಟಿನ ರಾಸಾಯನಿಕ ಕ್ರಿಯೆಗೆ ಅನುಕೂಲ ಮಾಡಿಕೊಟ್ಟು ಆ ವಸ್ತು ಗಟ್ಟಿಯಾಗಿ ಶಕ್ತಿಯುತವಾಗುವಂತೆ ಮಾಡಲು ಕ್ಯೂರಿಂಗ್ ಸಹಾಯ ಮಾಡುತ್ತದೆ. ಹೀಗಾಗಿ ಕಟ್ಟಿದ ಕೆಲ ದಿನಗಳವರೆಗೆ ಅಗತ್ಯಕ್ಕೆ ತಕ್ಕಂತೆ ಆ ವಸ್ತುವನ್ನು ನೀರಿನಿಂದ ತಂಪಾಗಿಡುವುದು ಅಗತ್ಯ. ಹಾಗೆಂದು, ಕಾಲಮ್ಮುಗಳ ಮೇಲೆ, ಗೋಡೆಗಳ ಮೇಲೆ ಪೈಪಿನಿಂದ ಧಾರಾಳವಾಗಿ ನೀರು ಚಿಮ್ಮಿಸುತ್ತ ನೀರನ್ನು ಪೋಲು ಮಾಡುವುದು ಹಲವುಕಡೆ ಕಂಡು ಬರುತ್ತದೆ. ಹೆಚ್ಚು ನೀರು ಬಳಸಿದರೆ ಹೆಚ್ಚು ಒಳ್ಳೆಯದು ಎನ್ನುವ ನಂಬಿಕೆ ಸರಿಯಲ್ಲ. ಹೆಚ್ಚು ನೀರನ್ನು ಆ ವಸ್ತುವಿನ ಮೈಮೇಲೆ ಸುರಿಯುವುದಕ್ಕಿಂತ, ಆ ವಸ್ತುವನ್ನು ಹೆಚ್ಚು ಸಮಯ ತಂಪಾಗಿ ಇಡುವತ್ತ ಗಮನ ಕೊಡಿ. ಉದಾರಣೆಗೆ, ಕಾಂಕ್ರೀಟ್ ಕಂಬವನ್ನು ಗೋಣಿಚೀಲದಿಂದ ಸುತ್ತಿ, ಗೋಣಿಚೀಲ ಸದಾ ಒದ್ದೆಯಾಗಿ ಇರುವಂತೆ ನೋಡಿಕೊಳ್ಳುವುದು. ಇದರಿಂದ ಕ್ಯೂರಿಂಗ್ ಕೂಡಾ ಚೆನ್ನಾಗಿ ಆಗುತ್ತದೆ ಹಾಗೂ ನೀರು ಪೋಲಾಗುವುದೂ ಉಳಿಯುತ್ತದೆ. ಕ್ಯೂರಿಂಗಿನ ಮುಖ್ಯ ಉದ್ದೇಶ ಕಟ್ಟಲಾದ ವಸ್ತುವಿನ ಒಳಗಿನ ನೀರು ಆವಿಯಾಗಿ ಹೊರಹೋಗದಂತೆ ಕಾಪಾಡುವುದೇ ವಿನಃ ಅದರ ಮೇಲ್ಮೈ ಮೇಲೆ ಹೆಚ್ಚುವರಿಯಾಗಿ ನೀರು ಸುರಿಯುವುದಲ್ಲ ಎಂಬುದು ತಿಳಿದಿರಲಿ.

| | |
|---|---|
| ಕಾಲಮ್ಮು ಅಥವಾ ಗೋಡೆ (ಯಾವುದೇ ಲಂಬವಾಗಿ ಇರುವಂಥದ್ದು) | 24/48 ಗಂಟೆ |
| ಮೇಲ್ಛಾವಣಿ /ಸ್ಲಾಬ್ /ರೂಫ್: ಎಲ್ಲ ಆಧಾರ ಸ್ಥಂಭಗಳನ್ನೂ ಹಾಗೇ ಇಟ್ಟುಕೊಂಡು | 7 ದಿನ |
| ಮೇಲ್ಛಾವಣಿ/ ಸ್ಲಾಬ್/ ರೂಫ್ ಆಧಾರ ಸ್ಥಂಭಗಳ ಜೊತೆಗೂಡಿ | 14 ದಿನ |
| ಸ್ಲಾಬ್‌ನ ಜೊತೆಗೇ ಕಟ್ಟಲ್ಪಟ್ಟಿರುವ ಬೀಮ್, ಕಮಾನಿನ ತಳ ಇತ್ಯಾದಿ | 28 ದಿನ |

ಮೇಲೆ ಯಾವುದಾದರೂ ರಕ್ಷಣಾತ್ಮಕ ಹೊದಿಕೆ ಹಾಕುವುದು ಉತ್ತಮ. ಹಾಗೂ ವಾಟರ್ ಪ್ರೂಫಿಂಗ್ ಲೇಯರ್ ಯಾವುದೇ ಕಾರಣಕ್ಕೂ ಹಾನಿ ಆಗದಂತೆ ನೋಡಿಕೊಳ್ಳುವುದು ಅಗತ್ಯ. ವಾಟರ್ ಪ್ರೂಫಿಂಗ್ ಆದ ಜಾಗದಲ್ಲಿ ಒಡೆಯುವ, ಚುಚ್ಚುವ ಯಾವುದೇ ಕಾಮಗಾರಿ ಮಾಡಬೇಡಿ.

### ಎಲೆಕ್ಟ್ರಿಕಲ್ ಸಲಕರಣೆಗಳು

ವೈಯರು, ಸ್ವಿಚ್ ಬಾಕ್ಸುಗಳು, ಲೈಟುಗಳು ಇತ್ಯಾದಿ ವಿದ್ಯುತ್ ವಸ್ತುಗಳನ್ನು ಕೊಳ್ಳುವಾಗ 'ಐಎಸ್ಐ' ಮುದ್ರೆಯುಳ್ಳವುಗಳನ್ನೇ ಖರೀದಿಸಿ. ಕೇವಲ ಮೇಲ್ನೋಟದ ಅಂದಚಂದಕ್ಕೆ ಮರುಳಾಗದೆ, ಒಳ್ಳೆಯ ಬ್ರಾಂಡಿನ ವಸ್ತುಗಳನ್ನೇ ಬಳಸಿ. ತುಂಬ ಆಕರ್ಷಕವಾಗಿ ಕಾಣುವ ಅಗ್ಗದ ಬೆಲೆಯ ಹಲವು ಸ್ವಿಚ್ ಬೋರ್ಡುಗಳು, ದೀಪಗಳು (ತಯಾರಿಸಿದ ಕಂಪನಿಯ ಹೆಸರು ಅಥವಾ ಯಾವುದೇ ಗ್ಯಾರಂಟಿ ಇಲ್ಲದೆ) ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಇಂಥವುಗಳನ್ನು ಖರೀದಿಸುವಾಗ ಎಚ್ಚರದಿಂದಿರಿ. ವಿದ್ಯುತ್ ಪರಿಕರಗಳ ಆಯ್ಕೆಯಲ್ಲಿ ಎಲ್ಲಕ್ಕಿಂತ ಹೆಚ್ಚಿನ ಆದ್ಯತೆ ಸುರಕ್ಷತೆಗೆ ಇರಬೇಕು ಎಂಬುದು ತಿಳಿದಿರಲಿ.

### ಮನೆ ನಿರ್ಮಾಣ: ಮುಖ್ಯ ಕೆಲಸಗಳು

- ಶಟರಿಂಗ್ (ಫಾರ್ಮ್‌ವರ್ಕ್)
- ಕಾಂಕ್ರೀಟ್ಗೋ
- ಡೆ ಕಟ್ಟುವಿಕೆ (ಮೇಸನ್ರಿ ವರ್ಕ್)
- ಗಿಲಾಯಿ ಅಥವಾ ಗಾರೆ (ಪ್ಲಾಸ್ಟರಿಂಗ್)
- ಕ್ಯೂರಿಂಗ್
- ಬಾಗಿಲು, ಕಿಟಕಿ ಜೋಡಣೆ
- ಎಲೆಕ್ಟ್ರಿಕ್ ಹಾಗೂ ಪ್ಲಂಬಿಂಗ್ ಕೆಲಸಗಳು
- ನೆಲದ ಹಾಸು – ಗ್ರಾನೈಟ್, ಮಾರ್ಬಲ್, ಟೈಲ್ ಇತ್ಯಾದಿ
- ಪೇಂಟಿಂಗ್
- ಹೊರಗಿನ ಕೆಲಸಗಳು – ಕಾಂಪೌಂಡ್ ಗೋಡೆ, ನೀರಿನ ಟಾಕಿ, ಸೀವೇಜ್/ವಿದ್ಯುತ್ ಸಂಪರ್ಕ ಇತ್ಯಾದಿ.
- ಕಪಾಟು, ಶೋಕೇಸ್ ಇತ್ಯಾದಿ ವುಡ್ ವರ್ಕುಗಳು (ಕೊನೆಯಲ್ಲಿ)

ಕಟ್ಟಡ ಕಾಮಗಾರಿಯಲ್ಲಿಯ ಕಾಂಕ್ರೀಟನ್ನು ಅದು ಗಟ್ಟಿಯಾಗುವವರೆಗೂ ತಡೆದು ಹಿಡಿಯಲು ಬಳಸುವ ಹಲಗೆ/ಸ್ಟೀಲ್ ಪ್ಲೇಟುಗಳನ್ನು ಅಗತ್ಯಕ್ಕೆ ತಕ್ಕಂತೆ ಜೋಡಿಸುವುದಕ್ಕೆ ಶಟರಿಂಗ್ ಅನ್ನುತ್ತಾರೆ.

